ಅನುಸರಿಸುತ್ತಿದ್ದರು. ಇಂತಹ ಕಾರಣಗಳಿಗಾಗಿಯೇ ನಾವು ಹೊರಬೀಡಿನ ದಿನವನ್ನು ಚಾತಕ ಪಕ್ಷಿಗಳಂತೆ ಕಾಯುತ್ತಿದ್ದುದು! ಇಲ್ಲಿ, ಯಾವುದಕ್ಕೂ ಪರಿತಪಿಸದ ನಮ್ಮೂರಿನ ಸುಖದ ಜನರನ್ನು ನಾನು ಕಂಡೆ. ಮುಗ್ಧ ಮತ್ತು ಸಂತಸದ ಜಗತ್ತಿನ ಒಡೆಯರಾಗಿದ್ದ ಅವರು ನಮ್ಮ ಹಳ್ಳಿಗೆ ಬೇಕಾಗಿದ್ದ ಸಾಮರಸ್ಯದ ರಾಯಭಾರಿಗಳನ್ನಾಗಿ ನಮ್ಮನ್ನು ರೂಪಿಸಿದರು.

ಇದರ ನಡುವೆ ಬೆನ್ನುಬಾಗಿ ಊರುಗೋಲಿನ ಸಹಾಯದಿಂದ ನಡೆಯುತ್ತಿದ್ದ ಸಿದ್ದಮ್ಮಜ್ಜಿ, ಬೇಯಿಸಿದ ಎರಡು ಕೋಳಿ ಮೊಟ್ಟೆಗಳನ್ನು ಸೆರಗಿನಲ್ಲಿ ಮರೆಮಾಡಿಕೊಂಡು, ಹಸಿ ಬಾಣಂತಿಯಾಗಿದ್ದ ಮಣೆಗಾರರ ಪೈಕಿ ಚಿಕ್ಕನರಸಿಗೆ ಕೊಟ್ಟುಬರುತ್ತಿದ್ದನ್ನು ನೋಡಿ ನಾನು ವಿಸ್ಮಿತನಾಗುತ್ತಿದ್ದೆ! ಸಹ ಬಾಳ್ವೆಯ ಗುಟ್ಟನ್ನು ತಮ್ಮ ವಿವೇಕದಿಂದ ಅರಿತಿದ್ದ ಸಂತಸಭರಿತರಾದ ಈ ಜನರ ಕಣ್ಣುಗಳು ಪ್ರಶಾಂತವಾಗಿ ಮಿನುಗುತ್ತಿದ್ದವು. ಇವುಗಳೆಲ್ಲದರ ನಡುವೆ ಅಲ್ಲಿದ್ದ ಇಪ್ಪೆ ಮರದ ನೆರಳಿನಲ್ಲಿ ಈಸಲು ಚಾಪೆಯ ಮೇಲೆ, ಮುಕ್ಕಾಲುವಾಸಿ ತಮ್ಮ ಬದುಕಿನ ಪಯಣದ ಕೊನೆಯಂಚಿನಲ್ಲಿದ್ದ ನಮ್ಮೂರಿನ ಹಿರಿಯರಾದ ಲಕ್ಕವ್ವಜ್ಜಿ, ಈರಕ್ಕ, ಹೊಂಬಾಳಮ್ಮ, ನಾಗಮ್ಮ, ದೊಡ್ಡಮ್ಮಕ್ಕ, ಚಿಕ್ಕಹನುಮಕ್ಕ, ರಂಗಮ್ಮಜ್ಜಿ ಮುಂತಾದವರೆಲ್ಲ ಕುಳಿತು, ಸಾಮೂಹಿಕವಾಗಿ ಹಾಡುತ್ತಿದ್ದ ಧ್ವನಿ ಅಂದು ಊರು ಪಡೆಯುತ್ತಿದ್ದ ಪರಮಾನಂದದ ಅನುಭವಗಳನ್ನು ಸಾರಿ ಹೇಳುವಂತೆ ಕೇಳಿಬರುತ್ತಿತ್ತು. ಅವರು ಹಾಡುತ್ತಿದ್ದ 'ಗುಣಸಾಗರಿ', 'ಗಂಗೆ–ಗೌರಿ ಜಗಳ', 'ಹಸೆ ಹಾಡು', ರಾಮ ಸೀತೆಯರನ್ನು ಕುರಿತ ಹಾಡುಗಳು ಎಷ್ಟು ಮೋಹಕ ಮತ್ತು ಸೌಂದರ್ಯದಿಂದ ಕೂಡಿದ್ದವು ಎನ್ನುವುದನ್ನು ವಿವರಿಸಲು ಹೋದರೆ ನನ್ನ ಮಾತುಗಳೇ ದುರ್ಬಲವಾಗುತ್ತವೆ. ಮುಖದ ಮೇಲಿನ ನೆರಿಗೆಗಳನ್ನೇ ತಮ್ಮ ಆಭರಣಗಳನ್ನಾಗಿ ಮಾಡಿಕೊಂಡಿದ್ದ, ಈಗಾಗಲೇ ಮೊಮ್ಮಕ್ಕಳು, ಮರಿಮಕ್ಕಳನ್ನು ಕಂಡಿದ್ದ ಈ ಹಿರಿಯರ ಗುಂಪು, ದ್ವೇಷ, ಈರ್ಷೆಗಳಿಂದ ಕಲುಷಿತವಾಗುತ್ತಿದ್ದ ಈ ಭೂಮಿಯನ್ನು ಸುಂದರವಾಗಿರಿಸಲೆಂದೇ ಸ್ವರ್ಗದಿಂದ ಬಂದ ದೇವತೆಗಳಂತಿದ್ದರು. ಮೌನದಿಂದಲೇ ನಡೆದಾಡುವ ಆ ದೇವತೆಗಳಿಗೆಲ್ಲಾ ವಂದಿಸಿದೆ. ರೆಪ್ಪೆ ಒಂದು ಮಾಡಿದರೆ, ಎಲ್ಲಿ ಮಾನವ ಪ್ರೇಮದ ಈ ಸುಂದರ ದೃಶ್ಯಗಳು ನನ್ನಿಂದ ಕಣ್ಮರೆಯಾಗುವವೋ ಎಂದು ಹೆದರಿ, ಬಿಟ್ಟ ಕಣ್ಣುಗಳಿಂದ ಎಲ್ಲವನ್ನೂ ನನ್ನೊಳಗೆ

